**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು**

ಸಿ.ಸಿ.699/2019

| ಸಾಕ್ಷಿದಾರರ ಹೆಸರು | ದೇವರಾಜ್ | ಪ್ರಮಾಣ ಮಾಡಿದ ದಿನಾಂಕ | 07-10-2022 |
|---|---|---|---|
| ತಂದೆಯ ಹೆಸರು | ಬಸಪ್ಪ | | |
| ವಯಸ್ಸು | 28 ವರ್ಷ | | |
| ವೃತ್ತಿ | ಕೂಲಿ | ಚಾಸಾ | 1 |
| ವಾಸಸ್ಥಳ | ಹಿರೇನಲ್ಲೂರು | ಫ್ರಾಸಾ | 2 |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಚಾಸಾ-2 ನನ್ನ ತಂಗಿ ಗಂಡನಾಗಬೇಕು. ನನ್ನ ಮನೆಗೂ ಮತ್ತು ಹಿರೇನಲ್ಲೂರು ಮದ್ಯದ ಅಂಗಡಿಗೂ ಅರ್ಧ ಕಿ.ಮೀ. ಆಗುತ್ತದೆ. ಈಗೆ ಸುಮಾರು 5 ವರ್ಷಗಳ ಹಿಂದೆ ಮ.12.30 ರ ಸಮಯದಲ್ಲಿ ಚಾಸಾ-3 ರವರು ಚಾಸಾ-2 ರವರಿಗೆ ತಿಮ್ಮಪ್ಪನ ಹೋಟೆಲ್ ಬಳಿ ಹಲ್ಲೆ ಮಾಡಿರುವುದಾಗಿ ಬಂದು ನನಗೆ ತಿಳಿಸಿರುತ್ತಾರೆ. ಆಗ ನಾನು ಹೋಗಿ ನೋಡಿದಾಗ ಚಾಸಾ-2 ರವರು ತಿಮ್ಮಪ್ಪನ ಹೋಟೆಲ್ ನ ಹಿಂಭಾಗದಲ್ಲಿ ಬಿದಿದ್ದರು. ಚಾಸಾ-2 ರವರಿಗೆ ತಲೆಗೆ ಹಾಗೂ ಎಲೆಗೆ ಪೆಟ್ಟಾಗಿರುತ್ತದೆ. ಚಾಸಾ-2 ರವರಿಗೆ ಯೋಗೇಂದ್ರ ಹಾಗೂ ಆತನ ತಮ್ಮ ಹಲ್ಲೆ ಮಾಡಿರುವುದು ನನಗೆ ತಿಳಿದಿರುತ್ತದೆ. ಚಾಸಾ-2 ರವರಿಗೆ ಯೋಗೇಂದ್ರ ಹಾಗೂ ಆತನ ತಮ್ಮ ಬಾಟಲಿ ಹಾಗೂ ಇಟ್ಟಿಗೆಯಿಂದ ಹಲ್ಲೆ ಮಾಡಿರುವ ವಿಚಾರ ತಿಳಿದಿರುತ್ತದೆ. ನಂತರ ನಾನು ಚಾಸಾ-2 ರವರನ್ನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತೇನೆ. ಈ ಬಗ್ಗೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಂತರ ಪೊಲೀಸರು ದೂರು ಸಲ್ಲಿಸಿದ ಮೂರು ದಿನಗಳ ನಂತರ ನನ್ನನ್ನು ತಿಮ್ಮಪ್ಪನ ಹೋಟೆಲ್ ನ ಹಿಂಭಾಗಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆಗ ನನ್ನ ಜೊತೆ ಚಾಸಾ-9 ಹಾಗೂ 10 ರವರು ಇದ್ದರು. ಆ ದಿನ ಪೊಲೀಸರಿಗೆ ಘಟನಾ ಸ್ಥಳವನ್ನು ಚಾಸಾ-5 ರವರು ತೋರಿಸಿರುತ್ತಾರೆ. ಆಗ ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿಗಳು ಚಾಸಾ-5 ರವರು ಇಟ್ಟಿಗೆ ತುಂಡು ಹಾಗೂ ಹೊಡೆದ ಬಾಟಲಿಯನ್ನು ಪೊಲೀಸರಿಗೆ ನೀಡಿರುತ್ತಾರೆ. ಸಾಕ್ಷಿಗೆ ಸ್ಥಳ ಹಾಗೂ ಅಮಾನತ್ತು ಮಹಜರನ್ನು ತೋರಿಸಿದ್ದು ಅದನ್ನು ನಿಪಿ-3, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-3 ರಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಎರಡು ಛಾಯಾಚಿತ್ರವನ್ನು ಗುರುತಿಸಿದ್ದು ಅವುಗಳಲ್ಲಿ ತಾನು ಇರುವುದಾಗಿ ಒಪ್ಪಿಕೊಂಡ ಕಾರಣ ಅವುಗಳನ್ನು ನಿಪಿ-4 ಹಾಗೂ ನಿಪಿ-5 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಎಪಿಪಿಯವರು ಸಮಯಕೋರಿಕೊಂಡ ಮೇರೆಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು.